


## ಸೈನ್‌ನೌ

ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಅಥವಾ ಟ್ಯಾಬ್ಲೆಟ್ ಮೂಲಕ ದಾಖಲೆಗಳಿಗೆ ಸುಲಭವಾಗಿ ಸಹಿ ಮಾಡಬಹುದು. ನಿಮ್ಮ ಎಲೆಕ್ಟ್ರಾನಿಕ್ ಸಹಿಯನ್ನು ಸೃಷ್ಟಿಸಿ ಕಾಪಿಟ್ಟುಕೊಳ್ಳಬಹುದು. ವಿವಿಧ ಮೂಲಗಳಿಂದ ದಾಖಲೆಗಳನ್ನು ಇಂಪೋರ್ಟ್ ಮಾಡಿಕೊಳ್ಳಬಹುದು. ಕಚೇರಿಯ ಮೇಲಧಿಕಾರಿಯಾಗಿ ಕಾರ್ಯ ನಿರ್ವಹಿಸುವವರು ವಿವಿಧ ದಾಖಲೆಗಳಿಗೆ ಆಗಿಂದಾಗ್ಗೆ ಸಹಿ ಹಾಕಬೇಕಾಗುತ್ತದೆ. ಆದರೆ ಆಧುನಿಕ ಕಚೇರಿಗಳಲ್ಲಿ ಅಲ್ಲೇ ಹಾಜರಿದ್ದು ಸಹಿ ಮಾಡುವ ಸಾಧ್ಯತೆ ಕಡಿಮೆ. ಹೀಗಾಗಿ ಮೊಬೈಲ್ ಜಾಲದ ಮೂಲಕ ಸಹಿ ಹಾಕಲು ಈ ಆ್ಯಪ್ ನೆರವು ನೀಡುತ್ತದೆ. ದಾಖಲೆಗಳನ್ನು ಇಮೇಲ್, ಕ್ಲೌಡ್ ಸ್ಟೋರೇಜ್, ಮೆಮೊರಿ ಕಾರ್ಡ್ ಮೂಲಕ ಉಚಿತವಾಗಿ ಇಂಪೋರ್ಟ್ ಮಾಡಿಕೊಳ್ಳಬಹುದು.

## ಒಬೆಸಿಟಿಡಿಪ್ರೆಶನ್

ಬೊಜ್ಜು ಹಾಗೂ ಖಿನ್ನತೆಯಿಂದ ನರಳುವ ರೋಗಿಗಳ ತಪಾಸಣೆಯಲ್ಲಿ ನರ್ಸ್‌ಗಳಿಗೆ ನೆರವು ನೀಡುವ ಈ ಆ್ಯಪ್ ರೋಗಿಗಳ ವಿವರಗಳನ್ನು ಇನ್ನಷ್ಟು ಕಲೆ ಹಾಕಿ ವಿಶ್ಲೇಷಣೆಗೆ ಸಹಾಯ ಮಾಡುತ್ತದೆ. ತಂಬಾಕು ಚಟ, ಮಕ್ಕಳು ಮತ್ತು ವಯಸ್ಕರಲ್ಲಿ ಖಿನ್ನತೆ ಹಾಗೂ ಬೊಜ್ಜಿನ ತಪಾಸಣೆ ನಡೆಸುವಾಗ ವಿವರಣೆಗಳನ್ನು ದಾಖಲಿಸಿದರೆ, ಅಗತ್ಯವಿದ್ದ ಇನ್ನಷ್ಟು ಪ್ರಶ್ನೆಗಳನ್ನು ಈ ಆ್ಯಪ್ ಮೊಬೈಲ್ ಮೇಲೆ ಮೂಡಿಸುತ್ತದೆ. ಉದಾಹರಣೆಗೆ ಸಿಗರೇಟ್ ಚಟವಿದ್ದರೆ, ತಂಬಾಕು ಅಗಿಯುವ ಚಟ ಇದೆಯೇ ಎಂಬ ಪ್ರಶ್ನೆ ಮೊಬೈಲ್ ಸ್ಕ್ರೀನ್ ಮೇಲೆ ಮೂಡುತ್ತದೆ. ಇದು ರೋಗಿಗಳ ಜೊತೆ ಸಮಾಲೋಚನೆ ನಡೆಸಿ ಸಲಹೆ ನೀಡಲು ನೆರವಾಗುತ್ತದೆ ಎಂದು ಇದನ್ನು ಕಂಡು ಹಿಡಿದ ಕೊಲಂಬಿಯ ನರ್ಸಿಂಗ್ ಕಾಲೇಜ್ ಪ್ರಕಟಣೆ ಹೇಳಿದೆ.







## ಮಾಲ್‌ವೇರ್‌ಬೈಟ್ಸ್

ನಿಮ್ಮ ಆ್ಯಂಡ್ರಾಯ್ಡ್ ಫೋನ್‌ಗೆ ವೈರಸ್‌ನಿಂದ ಸಂಪೂರ್ಣ ರಕ್ಷಣೆ ನೀಡುವ ಉಚಿತ ಆ್ಯಪ್. ಸರಳವಾದ ಮೇಲ್ಮೈ. ಬಳಕೆ ಮಾಡುವಾಗ ಇತರ ಆ್ಯಪ್‌ಗಳಿಗೆ ಅಡ್ಡಿ ಉಂಟು ಮಾಡದೇ ಸಲೀಸಾಗಿ ಬಳಸಬಹುದು. ಪ್ರೈವೆಸಿ ಸ್ಕ್ಯಾನರ್ ಮತ್ತು ಆ್ಯಪ್ ಮ್ಯಾನೇಜರ್ ಇದ್ದು, ವೇಗವಾಗಿ ವೈರಸ್‌ಗೆ ಸ್ಕ್ಯಾನ್ ಮಾಡುತ್ತದೆ. ಇದು ಈಗಾಗಲೇ ಕಂಪ್ಯೂಟರ್‌ನಲ್ಲಿ ವೈರಸ್ ಒರೆಸಿ ಹಾಕುವ ಜನಪ್ರಿಯ ಆ್ಯಪ್.




## ಸೆಲ್ಫ್ - ಕಂಟ್ರೋಲ್

ಇದು ವಿದ್ಯಾರ್ಥಿಗಳಿಗೆ ನೆರವು ನೀಡುವ ಆ್ಯಪ್. ಓದುತ್ತಿರುವಾಗ ಗಮನ ಬೇರೆ ಕಡೆ ಹರಿಸದಂತೆ ವೆಬ್‌ಸೈಟ್‌ಗಳನ್ನು ಮರೆ ಮಾಡುತ್ತದೆ. ಮ್ಯಾಕ್ ಬಳಕೆದಾರರ ಈ ಆ್ಯಪ್ ವೆಬ್‌ಸೈಟ್‌ಗಳನ್ನಲ್ಲದೆ ಟ್ವಿಟ್ಟರ್, ಫೇಸ್‌ಬುಕ್ ಮೊದಲಾದವುಗಳನ್ನು ಮರೆ ಮಾಡುತ್ತದೆ.

■ ಎಸ್. ತುಂಬೆ